**ಸಾಕ್ಷಿಯನ್ನು ದಿನಾಂಕಃ 09.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಯರ ಪರ ಶ್ರೀ ಎಂ ಎಂ ಪಿ ವಕೀಲರಿಂದಃ**

1. ನಾವು 4 ಜನ ಅಣ್ಣ ತಮ್ಮಂದಿರು. ವಾದಿಯರು ನನ್ನ ಮೊದಲನೆ ಹೆಂಡತಿ ನಾಗಮ್ಮನವರ ಮಕ್ಕಳು. ನಾಗಮ್ಮ ಬದುಕಿದ್ದಾರೆ. ಅವರು 30-40 ವರ್ಷಗಳಿಂದ ನನ್ನ ಜೊತೆ ಇಲ್ಲ. ಅವರು ಗುರುದೇವರ ಹಳ್ಳಿಯಲ್ಲಿ ಇದ್ದಾರೆ. ನನಗೆ ಮತ್ತು ಅವರಿಗೆ ವಿವಾಹ ವಿಚ್ಛೇದನ ಆಗಿಲ್ಲ. ನಾನು ನನ್ನ ಕಿರಿಯ ಹೆಂಡತಿ ಜೊತೆ ಇದ್ದೇನೆ. ಬೋರೇಗೌಡ ನನ್ನ ತಮ್ಮ ಆಗಿದ್ದು ಅವರು ನನ್ನ ವಿರುದ್ಧ ವಿಭಾಗ ಕೋರಿ ಕೇಸ್ ಹಾಕಿದ್ದರು ಎಂದರೆ ಸರಿ. ಅದರ ನಂಬರ್ ಅಸಲು ದಾವಾ 147/2003 ಎಂದರೆ ಸರಿ. ಆ ಕೇಸ್ ನಲ್ಲಿ ನಾನು ಮತ್ತು ನಮ್ಮ ಅಣ್ಣ ತಮ್ಮಂದಿರು ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿ. ಅದರಲ್ಲಿ ನಮ್ಮ ಒಟ್ಟು ಕುಟುಂಬದ ಆಸ್ತಿಗಳನ್ನು ನಾವು ಅಣ್ಣ ತಮ್ಮಂದಿರು ವಿಭಾಗ ಮಾಡಿಕೊಂಡೆವು ಎಂದರೆ ಸರಿ. ಅದರಲ್ಲಿ ದಾವಾ ಷೆಡ್ಯೂಲ್ ಐಟಂ ನಂಬರ್ 1 ರಿಂದ 6 ರ ಆಸ್ತಿಗಳು ನನ್ನ ಭಾಗಕ್ಕೆ ಬಂದಿವೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅವುಗಳನ್ನು ತಾನು ತನ್ನ ಮೊಮ್ಮಗಳಿಗೆ ವಿಲ್ ಬರೆದಿದ್ದೇನೆ ಎಂದು ನುಡಿಯುತ್ತಾರೆ. ಸಾಕ್ಷಿಯು ಪುನಃ ಆ ಆಸ್ತಿಗಳನ್ನು ತನ್ನ ತಾಯಿ ಕೊಟ್ಟಿದ್ದು ಎಂದು ನುಡಿದಿರುತ್ತಾರೆ. ದಾವಾ ಷೆಡ್ಯೂಲ್ ಐಟಂ ನಂಬರ್ 7 ರಿಂದ 13 ರ ಆಸ್ತಿಗಳು ಸಹ ನನಗೆ ಮೇಲ್ಕಂಡ ದಾವೆಯಲ್ಲಿ ಆದ ರಾಜಿ ಮೂಲಕ ಬಂದಿವೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಅದರಲ್ಲಿ 8 ಗುಂಟೆ ಜಮೀನನ್ನು ಮಾರಾಟ ಮಾಡಿರುವುದಾಗಿ ನುಡಿದಿರುತ್ತಾರೆ.

(**ಈ ಹಂತದಲ್ಲಿ ಸಾಕ್ಷಿಯು ಪದೇ ಪದೇ ಹಲವಾರು ವಿಷಯಗಳನ್ನು ಮಾತನಾಡುತ್ತಿದ್ದು ಆ ಬಗ್ಗೆ ನ್ಯಾಯಾಲಯ ಮತ್ತು ಅವರ ಪರ ವಕೀಲರು ಸುಮ್ಮನಿರಬೇಕೆಂದು ಹೇಳಿದರೂ ಸಹ ಕೇಳದೇ ಬಾಯಿಗೆ ಬಂದಂತೆ ಮಾತನಾಡುತ್ತಿದ್ದರಿಂದ ಸಾಕ್ಷಿಯ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು.**)

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.